# ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಹಾಗೂ ಅಭಿವೃದ್ಧಿಶೀಲ ದೇಶಗಳು

ನಾನು ಭಾರತದ ಕಾರ್ಮಿಕರ ಪರವಾಗಿ ಈ ಸಭೆಗೆ ನಿಮ್ಮನ್ನು ಸ್ವಾಗತಿಸುತ್ತೇನೆ. ಈ ಸಭೆಯ ಅಧ್ಯಕ್ಷರಾಗಿ ನಮ್ಮ ಕಾರ್ಮಿಕ ಸಚಿವ ರವೀಂದ್ರ ವರ್ಮಾ ಅವರನ್ನು ಚುನಾಯಿಸಿರುವುದು ನಮಗೆ ಇನ್ನಷ್ಟು ಸಂತೋಷದ ವಿಷಯವಾಗಿದೆ. ನಮ್ಮ ದೇಶಕ್ಕೆ ತೋರಿಸಿದ ಈ ಗೌರವಕ್ಕಾಗಿ ನಾನು ನನ್ನ ದೇಶದ ಜನಗಳ ಕೃತಜ್ಞತೆಯನ್ನು ಸೂಚಿಸುತ್ತಿದ್ದೇನೆ.

ನಮ್ಮ ಕಾರ್ಮಿಕ ವರ್ಗ ತನ್ನ ದೇಶ ಹಿಂದೆ ಸಾಧಿಸಿದ ಸಾಧನೆಗಳ ಬಗ್ಗೆ ಹೆಮ್ಮೆ ಪಡು ವುದಷ್ಟೇ ಅಲ್ಲ ; ಮುಂದೆಯೂ ಈ ಪರಂಪರೆಯನ್ನು ಶ್ರೀಮಂತಗೊಳಿಸಿ ಮುಂದುವರಿಸಿ ಕೊಂಡು ಹೋಗಲು ಬಯಸುತ್ತದೆ. ನ್ಯಾಯ, ಸಮಾನತೆ, ಸ್ವಾತಂತ್ರ್ಯಗಳ ಆಧಾರದ ಮೇಲೆ ನಮ್ಮ ಪುರಾತನ ದೇಶವನ್ನು ಆಧುನೀಕರಣಗೊಳಿಸಲು ಈ ಜನ ಬದ್ಧರಾಗಿ ದ್ದಾರೆ. ಈ ಸಂದರ್ಭದಲ್ಲಿಯೇ ಅಂತರರಾಷ್ಟ್ರೀಯ ಕಾರ್ಮಿಕ ಸಂಘಕ್ಕೆ ದಾರ್ಶನಿಕ ಮತ್ತು ಪ್ರಾಕ್ಟಿಕಲ್ ಮಟ್ಟದಲ್ಲಿ ದಾರಿ ಕಂಡುಕೊಳ್ಳುವ ಸಂಸ್ಥೆಯಾಗಿ—ಸಾಮಾಜಿಕ ನ್ಯಾಯ ಮತ್ತು ಶಾಂತಿಯ ಬುನಾದಿಯ ಮೇಲೆ ಹೊಸ ಪ್ರಪಂಚ ವ್ಯವಸ್ಥೆಯನ್ನು ಕಂಡುಕೊಳ್ಳುವಲ್ಲಿ ಬಹುಮುಖ್ಯ ಪಾತ್ರವಿರುವುದು.

ಕೆಲಸದ ಸ್ಥಿತಿಯಲ್ಲಿ ಒಂದು ಮಟ್ಟವನ್ನು ಕಾಯಲು ಹೋರಾಡುವ ಮೂಲಕ, ಮನುಷ್ಯನ ಅಗತ್ಯ ಮತ್ತು ಘನತೆಗೆ ತಕ್ಕಂತೆ ನೌಕರಿಯ ನಿಯಮ ಹಾಗೂ ಸಂಬಳ ನಿಗದಿಗೆ ಒತ್ತಾಯಿಸುವುದರ ಮೂಲಕ, ಶೋಷಣೆ, ತುಳಿತಗಳ ಕರಾಳ ಕೊಳಕುಗಳ ಮೇಲೆ ಬೆಳಕು ಬೀರಿ ಅವುಗಳನ್ನು ಪ್ರತಿಭಟಿಸುವುದರ ಮೂಲಕ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಜಗತ್ತಿನ ಕಾರ್ಮಿಕರ ಪ್ರೀತಿವಿಶ್ವಾಸಗಳನ್ನು ಗೆದ್ದುಕೊಂಡಿದೆ. ಈ ಕಾರಣಕ್ಕಾಗಿಯೇ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಕಾರ್ಮಿಕರೂ ಹೊಸಪ್ರಪಂಚ ವ್ಯವಸ್ಥೆಗಾಗಿ ತಾವು ನಡೆಸುತ್ತಿರುವ ಹೋರಾಟಕ್ಕಾಗಿ ಸಹಾಯ ಮತ್ತು ಬೆಂಬಲದ ಆಸೆ ನಿರೀಕ್ಷೆಗಳಿಂದ ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಕಡೆ ನೋಡುತ್ತಿದ್ದಾರೆ. ಪೂರ್ಣ ಕಾಲಾವಧಿಯ ಉದ್ಯೋಗ ಮತ್ತು ಕನಿಷ್ಠ ಅಗತ್ಯಗಳ ಬಗ್ಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಇತ್ತೀಚೆಗೆ ರೂಪಿಸಿದ ಕಾರ್ಯಕ್ರಮಗಳಿಂದ ಈ ಆಸೆ ಮತ್ತು ನಿರೀಕ್ಷೆ ಹೆಚ್ಚು

ಪ್ರಖರವಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಮಟ್ಟಿಗೆ ಅತಿಹೆಚ್ಚು ಅರ್ಥಪೂರ್ಣವಾ ಕಾರ್ಯಕ್ರಮಗಳೂ ಇವೇ ಆಗಿವೆ.

ಇಡೀ ಜಗತ್ತಿನ ಕಾರ್ಮಿಕ ವರ್ಗ ಉತ್ತಮ ಭವಿಷ್ಯ ರೂಪಿಸುವ ಆಸೆ ಹೊಂದಿದೆ ಅವರ ಹೋರಾಟವನ್ನೂ ಆ ಕಡೆಗೆ ಗುರಿ ಮಾಡಬೇಕಿದೆ. ಆದರೆ ಈ ಸಾಮಾನ ಸನ್ನಿವೇಶದಲ್ಲಿ, ಅಭಿವೃದ್ಧಿಶೀಲ ದೇಶಗಳು ಹೊಸ ಪ್ರಪಂಚವ್ಯವಸ್ಥೆಯ ಕಡೆಗೆ ನ ಸುತ್ತಿರುವ ತಮ್ಮ ಹೋರಾಟದಲ್ಲಿ ಎದುರಿಸುವ ಆರ್ಥಿಕ ಸಾಮಾಜಿಕ ಹಾಗೂ ರಾ ಕೀಯ ಸ್ಥಿತಿಗಳು, ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಬೆಳವಣಿಗೆಯೂ ಇದಕೆ ಸಮಾನವಾದ ಹಂತದಲ್ಲಿ ಎದುರಿಸಿದ ಅಥವಾ ಈಗ ಎದುರಿಸುತ್ತಿರುವ ಸ್ಥಿತಿಗಿಂತ ಭಿನ್ನ ವಾದವು. ಯಾಕೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಶೀಲ ದೇಶಗಳ ನಡೆಯಬೇಕಾದ ದಾರಿಯನ್ನು ತೋರಿಸುತ್ತಿರುವಾಗ, ಮತ್ತು ತಮ್ಮ ಭವಿಷ್ಯಕ್ಕೆ ಕನ್ನಡಿ ಹಿಡಿದಿರುವಾಗ, ಅಭಿವೃದ್ಧಿಶೀಲ ದೇಶಗಳಿಗೆ ತಮ್ಮ ಐತಿಹಾಸಿಕ ಹಿಂದುಳಿದಿರುವಿಕೆ ಯಿಂದಾಗಿ ಒಂದು ವಿಶೇಷಸೌಲಭ್ಯವೂ ಇದೆ. ಅಭಿವೃದ್ಧಿ ಹೊಂದಿದ ದೇಶಗಳು ಮಾಡಿದ ತಪ್ಪುಗಳನ್ನು ಮತ್ತು ಅಡೆತಡೆಗಳನ್ನು ದೂರೀಕರಿಸಬಲ್ಲ ಸೌಲಭ್ಯ ಇದು. ಅಭಿವೃದ್ಧಿಶೀಲ ದೇಶಗಳು ಈ ಸೌಲಭ್ಯವನ್ನು ಪೂರ್ತಿ ತಮ್ಮ ಅನುಕೂಲಕ್ಕಾಗಿ ವಿನಿಯೋಗಿಸುತ್ತಾರೆ. ಈ ಕೆಲಸದಲ್ಲಿ ಅಭಿವೃದ್ಧಿ ಬಗೆಗಿನ ಹಳೆಯ ಆದರ್ಶಗಳನ್ನು ಹೊಸ ಅನುಭವದ ಹಿನ್ನೆಲೆಯಲ್ಲಿ ನಿರಂತರವಾಗಿ ಪುನರ್ಮೌಲ್ಯೀಕರಣಕ್ಕೆ ಗುರಿಪಡಿಸಲು ಮತ್ತು ಅದಕ್ಕನುಗುಣವಾಗಿ ಸಾರ್ವಜನಿಕ ಹಾಗೂ ಅಧಿಕೃತ ಅಭಿಪ್ರಾಯಗಳನ್ನು ತಿದ್ದಲು ಅಭಿವೃದ್ಧಿಶೀಲ ದೇಶಗಳು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಬೆಂಬಲ ಬಯಸುತ್ತವೆ.

ಇಲ್ಲೇ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೆಲವುಜನರು ಹೊಂದಿರುವ ಒಂದು ಅಭಿಪ್ರಾಯದ ಬಗ್ಗೆ ಹೇಳಬಯಸುತ್ತೇನೆ : ಅದೆಂದರೆ, ಪ್ರಪಂಚದ ಇತರ ಅನೇಕ ಸಂಸ್ಥೆ ಗಳಂತೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಸಂವೇದನೆಗಳು, ಸೂಕ್ಷ್ಮೇಂದ್ರಿಯಗಳು ಅಭಿವೃದ್ಧಿಹೊಂದಿದ ರಾಷ್ಟ್ರಗಳು ತಮ್ಮ ಬೆಳವಣಿಗೆಯ ಹಂತದಲ್ಲಿ ಪಡೆದ ಇಂಥಿಂಥದೇ ಮಿತಿಗೊಂಡಿದೆ ಹಾಗೂ ಈ ಮಿತಿಯನ್ನು ಮೀರುವ ಶಕ್ತಿಗಳನ್ನು ಕಳೆದುಕೊಂಡಿದೆ ಎಂಬುದು. ಆದರೆ ಬೆಳವಣಿಗೆಯ ಸಮಸ್ಯೆಗಳನ್ನು ಸಾರ್ವತ್ರಿಕಗೊಳಿಸುವುದು ಹಾಗೂ ಅಲ್ಲಿ ಪರಿಷ್ಕಾರಗೊಂಡ ಮಾದರಿಗಳನ್ನು ಅಭಿವೃದ್ಧಿಶೀಲ ದೇಶಗಳಿಗೆ ಅನ್ವಯಿಸುವುದು ಸಲ್ಲದು. ಯಾಕೆಂದರೆ ಅಭಿವೃದ್ಧಿಶೀಲ ರಾಷ್ಟ್ರಗಳ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಅಷ್ಟೇ ಮುಖ್ಯವಾಗಿ ಸಾಂಸ್ಕೃತಿಕ ಸನ್ನಿವೇಶಗಳು ಅಭಿವೃದ್ಧಿಹೊಂದಿದ ದೇಶ ಗಳು ತಮ್ಮ ಬೆಳವಣಿಗೆಯ ಹಂತದಲ್ಲಿ ಎದುರಿಸಿದ ಸನ್ನಿವೇಶಗಳಿಗಿಂತ ಬೇರೆಯಾಗಿರು ವುದರಿಂದ, ಈ ಮಾದರಿಗಳು ಸಲ್ಲದೆ ಇರುವುದು ಮಾತ್ರವಲ್ಲ, ಎಂದು ಹೇಳಬಹುದಾದ

ಅನುಭವಗಳಿಂದ ಈ ಮಾದರಿಗಳ ಅನ್ವಿಕತೆ ಅಭಿವೃದ್ಧಿಶೀಲ ದೇಶಗಳಲ್ಲಿ ಹೊಸ ಮತ್ತು ಗಂಭೀರ ಟೆನ್ಶನ್ನುಗಳನ್ನೂ ಅಸಮತೋಲನವನ್ನು ಸೃಷ್ಟಿಸುತ್ತಿದೆ. ಈ ಮಾತಿನ ಉದ್ದೇಶ ಆಧುನೀಕರಣವನ್ನು ವಿರೋಧಿಸುವುದಿಲ್ಲ; ಬದಲು ಪಾಶ್ಚಾತ್ಯೀಕರಣವೇ ಆಧುನೀಕರಣದ ಒಂದೇ ಒಂದು ಸಾರ್ವತ್ರಿಕ ಮನ್ನಣೆ ಪಡೆಯುವ ಮಾದರಿಯೆಂಬ ಅಭಿಪ್ರಾಯವನ್ನು ವಿರೋಧಿಸುವುದು ; ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಪರಿಸ್ಥಿತಿ, ಅನುಭವ, ಅಗತ್ಯಗಳ ಮೇಲೆನಿಂತ ತಮ್ಮದೇ ಆದ ಮಾದರಿಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿವೆ ಅಥವಾ ಪ್ರಯತ್ನಿಸಬೇಕು ಎಂದು ವಿನಯ ಪೂರ್ವಕವಾಗಿ ತಿಳಿಸುವುದು. ನಾವು ಅವರಿಂದ ಖಂಡಿತವಾಗಿ ಕಲಿಯುತ್ತೇವೆ, ಆದರೆ ಅವರನ್ನು ಅನುಕರಿಸುವುದಿಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಪ್ರಜ್ಞಾಪೂರ್ವಕವಾಗಿ ಸರಿಯಾದ ಹೊಸಮಾದರಿಗಳನ್ನು ರೂಪಿಸುವ ಮತ್ತು ಅವನ್ನು ಕಾರ್ಯಗತಗೊಳಿಸುವ ಅಭಿವೃದ್ಧಿಶೀಲ ದೇಶಗಳ ಸಮಸ್ಯೆಯನ್ನು ಎದುರಿಸದೆ ಹೋದರೆ, ಅದರ ಉಪಯೋಗ ಅಭಿವೃದ್ಧಿಹೊಂದಿದ ದೇಶಗಳ ಮಟ್ಟಿಗಷ್ಟೇ ಕಟ್ಟುನಿಟ್ಟಾಗಿ ಪರಿಮಿತಗೊಳ್ಳಬಹುದೆಂಬುದು ನನ್ನ ಭಯ. ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಈ ಅಭಿಪ್ರಾಯಗಳನ್ನು ತಾತ್ವಿಕ ಮಟ್ಟದಲ್ಲಿ ಮಾತ್ರವಲ್ಲದೆ, ಪ್ರಾಕ್ಟಿಕಲ್ ಕೆಲಸದ ಮಟ್ಟದಲ್ಲೂ ಒಪ್ಪಿಕೊಳ್ಳಬೇಕಾಗಿದೆ.

ನಾನು ಏನು ಹೇಳುತ್ತಿದ್ದೇನೆಂಬುದನ್ನು ನನ್ನದೇ ದೇಶಕ್ಕೆ ಭಾರತಕ್ಕೆ, ಸಂಬಂಧಪಟ್ಟಂತೆ ಉದಾಹರಿಸಲು ನಿಮ್ಮ ಒಪ್ಪಿಗೆ ಕೇಳುತ್ತಿದ್ದೇನೆ. ನಾನು ಡೈರೆಕ್ಟರ್-ಜನರಲ್ ಅವರ ವರದಿಯ ಕೆಲವು ಸಂಗತಿಗಳ ಬಗ್ಗೆ ತಮ್ಮ ಗಮನ ಸೆಳೆಯಲಿದ್ದೇನೆ.

ಪೂರ್ಣಕಾಲಾವಧಿಯ ಉದ್ಯೋಗದ ಮಾನದಂಡ ಅನ್ವಯಿಸಿದರೆ, ಭಾರತದಲ್ಲಿ ಸುಮಾರು ಶೇಕಡಾ ನಲವತ್ತು ಮಂದಿ ನಿರುದ್ಯೋಗಿಗಳು. ಒಟ್ಟು ಜನಸಂಖ್ಯೆಯ ಶೇ. 45 ಮಂದಿ ಬಡತನದ ರೇಖೆಯ ಕೆಳಗಿದ್ದಾರೆ—ಅಂದರೆ ಅತಿ ಕಮ್ಮಿ ಮಟ್ಟದ ಜೀವನ ನಿರ್ವಹಣೆಗೂ ಬೇಕಾದಷ್ಟು ಇಲ್ಲದವರು ಇವರು. ಪ್ರತಿ ಪಂಚವಾರ್ಷಿಕ ಯೋಜನೆಯೊಂದಿಗೆ ನಿರುದ್ಯೋಗ ದೌಡಾಯಿಸುವ ವೇಗದಲ್ಲಿ ಏರುತ್ತಿದೆ. ಸುಮಾರು ಮೂವತ್ತು ಅಥವಾ ನಲವತ್ತು ದಶಲಕ್ಷ ಜನಗಳ ಮೊದಲನೆಯ ಅಗತ್ಯವೆಂದರೆ, ದೇಹ ಮತ್ತು ಆತ್ಮಗಳನ್ನು ಕಾಪಾಡಿಕೊಳ್ಳಲು, ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಒಂದು ಕೆಲಸ. ಕನಿಷ್ಠ ಅಗತ್ಯಗಳೆಂದರೆ, ದೇಶಕ್ಕೆ ಸಾಧ್ಯವಿರುವಂಥಾದ್ದು, ಜನರನ್ನು ರೋಗರುಜಿನಗಳಿಂದ ಮತ್ತು ಅಕಾಲಿಕ ಸಾವಿನಿಂದ ದೂರವಿಡಲು ಬೇಕಾದಂಥಾದ್ದು. ಇದು ಕಾಲಕ್ಕೆ ಬದ್ಧವಾದ ಕಾರ್ಯಕ್ರಮವಾಗಿರಬೇಕು, ಕಾಲಾತೀತ ಯುಟೋಪಿಯಾ ಅಲ್ಲ. ನಿರುದ್ಯೋಗ ಸಮಸ್ಯೆಯ ಚರ್ಚೆಯಲ್ಲಿ ಎರಡು ಮುಖ್ಯ ವಿಷಯಗಳನ್ನು ನಿರ್ಲಕ್ಷಿಸುತ್ತೇವೆಂಬುದೇ ಆಶ್ಚರ್ಯ, ಒಂದು, ಕೆಲಸಮಾಡುವ ಹಕ್ಕು ಅಥವಾ ನಿರುದ್ಯೋಗ ಭತ್ಯ ಕಾನೂನು ಬದ್ಧವಾಗಿ ಜಾರಿಯಾಗಬೇಕಾದ ಮೂಲಭೂತ ಹಕ್ಕಾಗದೆ ಹೋದಲ್ಲಿ

ಮತ್ತು ನಿರುದ್ಯೋಗ ಭತ್ಯೆ ಕೊಡಲು ಖರ್ಚು ಮಾಡಬೇಕಾದ ಹಣದ ಮೊತ್ತದ ಡೆಮೋಕ್ಲಿಸ್ ಕತ್ತಿ ಕೆಲಸಕೊಡುವ ಮಾಲಿಕರ ಮತ್ತು ಸರಕಾರದ ತಲೆಯ ಮೇಲೆ ತೂಗದೆ ಹೋದಲ್ಲಿ, ಅವರು ಉದ್ಯೋಗದ ಬಗ್ಗೆ ಸರಿಯಾದ ಯೋಜನೆ ತಯಾರಿಸುವ ಒತ್ತಾಯಕ್ಕೆ ಕಟ್ಟುಬೀಳುವುದಿಲ್ಲ. ಎರಡು, ನಿರುದ್ಯೋಗಿಗಳಿಗೆ—ಇವರಲ್ಲಿ ಹೆಚ್ಚಿನವರು ಗ್ರಾಮೀಣ ಬಡವರು—ತಮ್ಮನ್ನು ಸಂಘಟಿಸಿಕೊಳ್ಳಲು ಹಾಗೂ ತಮ್ಮ ಹಕ್ಕನ್ನು ಜಾರಿಗೊಳಿಸುವಂತೆ ಒತ್ತಾಯಿಸಲು ಬೇಕಾದ ಸಹಾಯ ಕೊಡದೆ ಹೋದರೆ, ಯಾವುದೇ ಸಾಮಾಜಿಕ ಬದ್ಧತೆ ಇಲ್ಲದ ಸರಕಾರದ ಆಡಳಿತಶಾಹಿ, ಸಂಪೂರ್ಣ ಕಾಲಾವಧಿಯ ನೌಕರಿಯ ಯೋಜನೆಯನ್ನೂ ಕಾರ್ಯಗತಗೊಳಿಸುವುದಿಲ್ಲ. ಅಭಿವೃದ್ಧಿಶೀಲ ದೇಶಗಳ ಈ ಎರಡು ವಾಸ್ತವಗಳು ಡೈರೆಕ್ಟರ್ ಜನರಲ್‌ರವರಿಗೆ ಅರ್ಥವಾಗಿದೆಯೆಂಬುದಕ್ಕೆ ವರದಿಯಲ್ಲಿ ಯಾವ ಆಧಾರವೂ ಇಲ್ಲ.

ಸರಿಯಾದ ತಂತ್ರಜ್ಞಾನದ ಬಗ್ಗೆ ಸಾಕಷ್ಟು ಹೇಳಲಾಗಿದೆ. ಆದರೆ, ಸರಳವಾದ ಸತ್ಯವೆಂದರೆ, ಬೇರೆ ತರಹದಲ್ಲಾದರೆ ಕೆಲಸ ಸಿಗದಿರುತ್ತಿದ್ದ ಸಾವಿರಾರು ನಿರುದ್ಯೋಗಿಗಳನ್ನು ಕೆಲಸಕ್ಕೆ ನೇಮಿಸಿಕೊಂಡು, ಅಗತ್ಯವಾದ ಸಾರ್ವಜನಿಕ ಅಗತ್ಯಗಳನ್ನು ಸೃಷ್ಟಿಸುವ ಪಬ್ಲಿಕ್ ಸೆಕ್ಟರ್ ಇರುವ ಅಭಿವೃದ್ಧಿಶೀಲ ದೇಶಗಳಲ್ಲಿ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಮತ್ತು ಸಾಮಾಜಿಕ ಆಸ್ತಿ (assets) ನಿರುದ್ಯೋಗ ಎದುರಿಸುವ ಮುಖ್ಯ ತಂತ್ರಗಳು. ಪಬ್ಲಿಕ್ ಸೆಕ್ಟರ್, ಪ್ರೈವೇಟ್ ಸೆಕ್ಟರ್, ಸಹಕಾರಿ ಸೆಕ್ಟರ್ ಇತ್ಯಾದಿಗಳಂತೆ, ಅನೇಕ ದಶಕಗಳ ಕಾಲ ಕೆಲಸಕೊಡಬಲ್ಲ ಪಬ್ಲಿಕ್ ವರ್ಕ್ಸ್ ಸೆಕ್ಟರ್ ಕೂಡ ಬೇಕಾಗಿದೆ. ಇದರ ಅಗತ್ಯ ಆಲದ ಮರದಂತೆ ಕಣ್ಣಿಗೆ ಢಾಳಾಗಿ ಹೊಡೆದು ಕಾಣುವಂಥದ್ದು. ಇದರ ಕೆಲಸ ಪ್ರಾರಂಭಿಸಲು, ಅಥವಾ ಅದರ ಉಪಯೋಗ ತಿಳಿದುಕೊಳ್ಳಲು ಸಂಶೋಧನೆ, ಮಾಹಿತಿ ಕಲೆ ಹಾಕುವುದು ಇತ್ಯಾದಿ ಮಾಡಬೇಕಾಗಿಲ್ಲ. ಇದು ಮೊದಲನೆಯ ಪ್ರಾಮುಖ್ಯತೆ ಪಡೆಯಬೇಕಾದ ಅಂಶ. ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಸಂವಿಧಾನದ ಪ್ರಸ್ತಾವನೆಯಲ್ಲಿ "ನಿರುದ್ಯೋಗವನ್ನು ತಡೆಯುವುದು" ಎಂಬ ಮಾತಿದೆ. ಅಭಿವೃದ್ಧಿಶೀಲ ದೇಶಗಳ ಕಾಳಜಿ ನಿರುದ್ಯೋಗ ತಡೆಯುವುದಕ್ಕಿಂತಲೂ ಹೆಚ್ಚಾಗಿ, ಉದ್ಯೋಗಗಳ ಸೃಷ್ಟಿಯಾಗಿದೆ. ಸರಿಯಾದ ತಂತ್ರಜ್ಞಾನದ ಬಗ್ಗೆ, ಸಹಜವಾಗಿಯೇ, ನಾವು ಯೋಚಿಸಬೇಕಾಗಿದೆ. ಆದರೆ ಈ ತಂತ್ರಜ್ಞಾನವನ್ನು ಆಯಾ ದೇಶದ ಅಗತ್ಯ, ಅನುಭವ, ಉಪಕರಣಗಳಿಗೆ ಅನ್ವಯಿಸದೆ ಕಂಡುಕೊಳ್ಳುವುದು ಸಾಧ್ಯವಿಲ್ಲ.

ಒತ್ತಾಯದ ಜೀತ ಪದ್ಧತಿ ತೊಲಗಿಸುವ ಬಗ್ಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘದಲ್ಲಿ ಎರಡು ಒಳ್ಳೆಯ ಒಪ್ಪಂದಗಳಿವೆ. ಆದರೆ ಎರಡೂ ಕೂಡಾ ನನ್ನ ದೇಶದಲ್ಲಿರುವ ಸ್ವತಂತ್ರ "ಜೀತದಾಳು" ಗಳ ಬಿಡುಗಡೆ ಬಗ್ಗೆ ಹೇಳುವುದಿಲ್ಲ. ಸಂಪೂರ್ಣ ಕಾಲಾವಧಿಯ ಕೆಲಸವಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಅಂಥಾ ಜೀತ ವಿಮುಕ್ತಿ ಸಹಜ. ಆದರೆ ಶಾಪವೆಂದರೆ ನಿರುದ್ಯೋಗವಿರುವ ಆರ್ಥಿಕ ಪರಿಸ್ಥಿತಿ. ಭಾರತದ ಅನುಭವದ ಮೇಲಿಂದ

ಹೇಳುವುದಾದರೆ, ಪುನರ್ವಸತಿ ವ್ಯವಸ್ಥೆ ಮಾಡದೆ ಜೀತದಾಳುಗಳನ್ನು ಸ್ವತಂತ್ರಗೊಳಿಸುವುದೆಂದರೆ, ಅವರನ್ನು ಕಾವಲಿಯಿಂದ ಒಲೆಗೆ ಎಸೆದಂತೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಒಪ್ಪಂದಗಳು ಈ ಸ್ಪಷ್ಟ ವಿಷಯದ ಬಗ್ಗೆ ಯಾಕೆ ಏನೂ ಹೇಳುವುದಿಲ್ಲ? ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಈ ಸಮಸ್ಯೆಗಳ ಕಡೆಗೆ ಅಭಿವೃದ್ಧಿ ಹೊಂದಿದ ದೇಶಗಳ ದೃಷ್ಟಿಕೋನದಿಂದ ನೋಡುತ್ತಿರುವುದು ಇದಕ್ಕೆ ಕಾರಣವೇ?

ಅನೇಕ ಒಪ್ಪಂದಗಳನ್ನು ಮತ್ತು ಗೊತ್ತುವಳಿಗಳನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಸಾಮಾಜಿಕ ಭದ್ರತೆಯ ಬಗ್ಗೆ ಒಪ್ಪಿಕೊಂಡಿದೆ. ಅವುಗಳ ಹಿನ್ನೆಲೆಗಿರುವುದು ರಾಷ್ಟ್ರ ಕಾನೂನನ್ನು ಜಾರಿಗೆ ತರುತ್ತದೆ; ಪೋಲೀಸರು ಅದನ್ನು ಕಾರ್ಯಗತಗೊಳಿಸುತ್ತಾರೆ; ಮಾಲಿಕರು ಅದರ ಖರ್ಚು ವೆಚ್ಚ ಭರಿಸುತ್ತಾರೆ" ಎಂಬ ನಂಬಿಕೆ. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಮಿಲಿಯಾಂತರ ಕೆಲಸಗಾರರು ಸ್ವಂತ ಉದ್ಯೋಗ ಅವಲಂಬಿಸಿರುವವರು–ಅಥವಾ ತೋಟಗಳಲ್ಲಿ, ಕಾಮಗಾರಿಗಳಲ್ಲಿ, ಸಂಚಾರವ್ಯವಸ್ಥೆಯಲ್ಲಿ, ಸಣ್ಣ ಅಥವಾ ಗ್ರಾಮೀಣ ಉದ್ಯಮಗಳಲ್ಲಿ ಋತುಕಾಲಕ್ಕೆ ಅನುಗುಣವಾಗಿ ಅಥವಾ ಸಣ್ಣ ಪುಟ್ಟ ಕೆಲಸಗಳಲ್ಲಿ ದಿನಗೂಲಿ ಮಾಡುತ್ತಿರುವರು. ಜೊತೆಗೆ ಸಣ್ಣ ಮತ್ತು ಮಾರ್ಜಿನಲ್ ಮಾಲೀಕರೂ ಸಾಕಷ್ಟಿದ್ದಾರೆ. ಇವರ ವಹಿವಾಟು ಹೆಚ್ಚು–ಕಡಿಮೆ ಕಾರ್ಮಿಕರಷ್ಟೇ ಇಂಥ ಸಂದರ್ಭಗಳಲ್ಲಿ ಸರಕಾರ ಕಾನೂನನ್ನು ಜಾರಿಗೆ ತರುವುದು ಅಥವಾ ಪೋಲೀಸರು ಅದನ್ನು ಕಾರ್ಯಗತಗೊಳಿಸುವುದು ಹೇಗೆ ಸಾಧ್ಯ? ಸ್ವಲ್ಪ ಯೋಚನೆ ಮಾಡಿದರೆ ಒಪ್ಪಂದಗಳು ಮೇಲೆ ಹೇಳಿದ ರೀತಿಯ ಕಾರ್ಮಿಕರಿಗೆ ಸಹಾಯ ಮಾಡಬೇಕೆಂದಾದರೆ ರಾಷ್ಟ್ರವೇ ಈ ಕಾರ್ಮಿಕರಿಗೆ ಕನಿಷ್ಠ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು ಎಂಬುದು ತಿಳಿದೀತು. ಪುನಃ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವಾಸ್ತವತೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ದೃಷ್ಟಿಕೋನವನ್ನು ಮಸುಕುಗೊಳಿಸುತ್ತಿರುವ ಉದಾಹರಣೆ ಇದು.

ಅಭಿವೃದ್ಧಿಶೀಲ ರಾಷ್ಟ್ರಗಳು ಒಪ್ಪಂದಗಳನ್ನು ಸುಲಭದಲ್ಲಿ ದೃಢಪಡಿಸುವುದಿಲ್ಲ. 151 ಒಪ್ಪಂದಗಳ ಪೈಕಿ ಭಾರತ ದೃಢಪಡಿಸುವುದು 34 ನ್ನು ಮಾತ್ರ. 87 ಮತ್ತು 98ನೇ ಒಪ್ಪಂದಗಳು ದೃಢಪಟ್ಟಿಲ್ಲದಿರುವುದರ ಪರಿಣಾಮ ನಮಗೆಲ್ಲಾ ಗೊತ್ತಿದ್ದದ್ದೇ. ಒಪ್ಪಂದಗಳ ಅನಿವಾರ್ಯತೆ ಅಭಿವೃದ್ಧಿಶೀಲ ರಾಷ್ಟ್ರಗಳ ಕಾರ್ಮಿಕರಿಗೆ ಎಷ್ಟೆಂದು ಒತ್ತಿ ಹೇಳಬೇಕಾದ್ದಿಲ್ಲ. ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ್ಳೊ ಒಪ್ಪಂದಗಳನ್ನು ದೃಢಪಡಿಸಿ ಉಳಿದವು. ದೃಢಪಡಿಸದೇ ಇದ್ದಾಗ ಸಮಾನ ಜಗತ್ತಿನ ದರ್ಶನದ ಪಾಡೇನು? ಜಗತ್ತಿನ ಒಂದು ಭಾಗ ಮಾತ್ರ ದೃಢಪಡಿಸುವ ಒಪ್ಪಂದಗಳನ್ನು ಒಂದಾದಮೇಲೊಂದರಂತೆ ಹೇರಿಸುವ ಬದಲು ಒತ್ತನ್ನು ಅಭಿವೃದ್ಧಿಶೀಲ ದೇಶಗಳೂ

ದೃಢಪಡಿಸುವ ಮತ್ತು ಕಾರ್ಯಗತಗೊಳಿಸುವ ಒಪ್ಪಂದಗಳ ಮೇಲೆ ಹಾಕುವ ಸಮಯ ಬಂದಿಲ್ಲವೇ ? ಅಭಿವೃದ್ಧಿ ಹೊಂದಿದ ದೇಶಗಳ ಬೆಳವಣಿಗೆಯನ್ನು ನಿರ್ಲಕ್ಷಿಸಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಜಗತ್ತು ನೌಕರಿಯ ಸ್ಥಿತಿಗತಿಗಳ ಮಟ್ಟಿಗೂ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಎಂಬ ಎರಡು ಕ್ಯಾಂಪುಗಳಾಗಿ ಒಡೆಯುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ.

ಅಂತರರಾಷ್ಟ್ರೀಯ ಕಾರ್ಮಿಕ ಸಂಘಕ್ಕೆ ಮಾನವೀಯ ಹಕ್ಕುಗಳ ಬಗ್ಗೆ ಅಗಾಧ ಕಾಳಜಿ ಇದೆ. ಆದರೆ 1975–76ರಲ್ಲಿ 20 ತಿಂಗಳ ಕಾಲ ನನ್ನ ದೇಶ ಸರ್ಕಾರ ಈ ಹಕ್ಕುಗಳನ್ನು ತೊತ್ತಳ ತುಳಿದಾಗ ನನ್ನಂತಹ ಅನೇಕ ಟ್ರೇಡ್ ಯೂನಿಯನ್ ಕೆಲಸಗಾರರು ಜೀವಂತವಾಗಿ ಹೊರಗೆ ಬರುತ್ತೇವೋ ಇಲ್ಲವೋ ಎಂದು ಗೊತ್ತಿಲ್ಲದೇ ಜೈಲುಗಳಲ್ಲಿ ಕೊಳೆಯುತ್ತಿದ್ದಾಗ ಪ್ರತಿಭಟಿಸಿದ ಜಗತ್ತಿನ ಲೇಬರ್‌ಸಂಸ್ಥೆಗಳು ಹೆಚ್ಚಿಲ್ಲ. ಇವು ಭಾರತದಂತಹ ಅಭಿವೃದ್ಧಿ ಶೀಲ ದೇಶಗಳಿಗೆ ಈ ಹಕ್ಕುಗಳು ಮುಖ್ಯವಲ್ಲವೆಂದು ತಿಳಿದವು ಎಂದು ಭಾವಿಸೋಣವೇ ? ಆ ಅನಾಹುತದ ಹತ್ತನೇ ಒಂದು ಭಾಗದಷ್ಟು ಅಭಿವೃದ್ಧಿ ಹೊಂದಿದ ದೇಶಗಳಿಗೆ ಆಗಿದ್ದರೆ ಏನಾಗುತ್ತಿತ್ತು ? ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಇತರ ಕೆಲವು ಕಾರ್ಮಿಕ ಸಂಘಗಳು 1975–76ರಲ್ಲಿ ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳ ಮಟ್ಟುಗೋಲನ್ನು ಪ್ರತಿಭಟಿಸಿದವು, ಹಾಗೂ ಸ್ವಾತಂತ್ರ್ಯ ಅಭೇದ್ಯವಾದ್ದು ಎಂಬ ತತ್ವವನ್ನು ಎತ್ತಿಹಿಡಿದವು ಎಂಬುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಎಷ್ಟೆ ಸುಲಲಿತ ತಾರ್ಕಿಕತೆ ಇದ್ದರೂ ಸ್ವಾತಂತ್ರ್ಯ ಅಭಿವೃದ್ಧಿ ಹೊಂದಿದ ದೇಶಗಳ ಹಕ್ಕು, ಅಭಿವೃದ್ಧಿ ಶೀಲ ದೇಶಗಳಿಗೆ ಇದರ ಅಗತ್ಯವಿಲ್ಲ, ಎಂದು ಯೋಚಿಸುವ ಮನಸ್ಸು ವಸಾಹತುಶಾಹಿ ಮನಸ್ಸು. ಜಗತ್ತಿನ ಅನೇಕ ದೇಶಗಳಲ್ಲಿ ಈ ಹಕ್ಕುಗಳನ್ನು ಈಗಲೂ ಮಟ್ಟುಗೋಲು ಹಾಕಲಾಗುತ್ತಿದೆ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಟ್ರೇಡ್ ಯೂನಿಯನ್ ಪ್ರಜಾಪ್ರಭುತ್ವ ಹಕ್ಕುಗಳ ಗತಿ ಬಗ್ಗೆ ಡೈರೆಕ್ಟರ್ ಜನರಲ್‌ರವರ ವರದಿಯಲ್ಲಿ ಪ್ರತಿ ವರ್ಷ ಒಂದು ಅಧ್ಯಾಯ ಇರಬೇಕು ಎಂದು ನನಗನ್ನಿಸುತ್ತದೆ. 20 ತಿಂಗಳ ಕಾಲ ಈ ಹಕ್ಕುಗಳನ್ನು ಕಳೆದುಕೊಂಡ, ಆಶ್ಚರ್ಯಕರವಾಗಿ ಅವುಗಳನ್ನು ಮರಳಿ ಪಡೆದ ಭಾರತೀಯರಿಗೆ ಅವುಗಳ ಬೆಲೆ ಗೊತ್ತು.

ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿ ಮಲ್ಟಿ–ನ್ಯಾಷನಲ್ ಸುಖಸಾಧನಗಳ ಮೇಲೆ ಬಂಡವಾಳಗಳನ್ನು ಹೂಡಿ ಲಾಭ ದೋಚುತ್ತಿದ್ದಾರೆ ಆಯಾ ದೇಶಗಳ ಆಡಳಿತ ವರ್ಗ ಸಂಪತ್ತಿನ ಬಹುಪಾಲನ್ನು ನುಂಗುತ್ತಿದೆ. ಅಧಿಕಾರಶಾಹಿ ರಾಷ್ಟ್ರೀಯ ವರಮಾನದ ಬಹುಪಾಲನ್ನು ತಿನ್ನುತ್ತಿರುವುದು ಮಾತ್ರವಲ್ಲ, ದೇಶದ ಬೆಳವಣಿಗೆಯಲ್ಲಿ ತೊಡಕನ್ನು ಒಡ್ಡುತ್ತಿದೆ.

ಯಾರ ಅಭಿವೃದ್ಧಿಗಾಗಿ ಅಭಿವೃದ್ಧಿಶೀಲ ದೇಶಗಳ ಬಡವರು ತಮ್ಮ ಬೆವರು ಮತ್ತು ನೆತ್ತರ ಮೂಲಕ ಹಿಂದೆ ಕಾಣಿಕೆ ಸಲ್ಲಿಸಿದ್ದರೋ ಆ ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಶೀಲ ದೇಶಗಳ ಬೆಳೆವಣಿಗೆಯನ್ನು ಪ್ರಚೋದಿಸುವಂತೆ ಸಹಾಯ ಧನ ಮತ್ತು ವ್ಯಾಪಾರದ ನಿಯಮಗಳನ್ನು ಬದಲಾಯಿಸಲು ನಿರಾಕರಿಸುತ್ತಿವೆ. ಈ ಸಂದರ್ಭದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಕಾರ್ಮಿಕರು ತಮ್ಮ ಸರಕಾರ ಮತ್ತು ಮಾಲೀಕರಂತಲ್ಲದೆ ಅವರ ಅಂತರರಾಷ್ಟ್ರೀಯ ಜವಾಬ್ದಾರಿಗೆ ಹೊಂದುವಂತಹ ಸ್ವತಂತ್ರ ದೃಷ್ಟಿಕೋನವನ್ನು ಅಭಿವೃದ್ಧಿಶೀಲ ದೇಶಗಳ ಕಾರ್ಮಿಕರ ಬಗ್ಗೆ ತಳೆಯ ಬೇಕೆಂದು ಈ ದೇಶಗಳ ಕಾರ್ಮಿಕರು ಅಪೇಕ್ಷಿಸುತ್ತಾರೆ. ಈ ಎಲ್ಲಾ ವಿಷಯಗಳಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅನುಕೂಲವಾಗುವ ಸ್ಪಷ್ಟವಾದ ಮತ್ತು ಇತ್ಯಾತ್ಮಕವಾದ ನಿಲುವನ್ನು ತಳೆಯಬೇಕು.

ಅಂತರರಾಷ್ಟ್ರೀಯ ಕಾರ್ಮಿಕಸಂಘಕ್ಕೆ ಗಣನೀಯ ಇತಿಹಾಸವಿದೆ. ಅದರ ಮುಂದೆ ದೊಡ್ಡ ಗುರಿಯೂ ಇದೆ. ಆದರೆ ಅದು ಅದರ ಪ್ರಾಮುಖ್ಯತೆಗಳನ್ನು ಪುನರ್‌ವ್ಯವಸ್ಥೆಗೊಳಿಸಬೇಕಾಗಿದೆ. ಸ್ವಲ್ಪ ಕಾಲ ಅದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ದೃಷ್ಟಿಕೋನವನ್ನು ಮತ್ತು ಮೌಲ್ಯವನ್ನು ಗಣಿಸಬೇಕಾಗಿದೆ. ಮನುಷ್ಯನ ವಿಧಿಯನ್ನು ಸಧ್ಯಕ್ಕೆ ನಿರ್ಧರಿಸುತ್ತಿರುವುದು ಈ ದೇಶಗಳು. ಹಿಂದೆ ಸೂಚಿಸಿದಂತೆ ಸಾರ್ವತ್ರಿಕಗೊಳಿಸಿದ ಹೇಳಿಕೆಗಳು ಸಲ್ಲವು. ಸ್ಪಷ್ಟಕ್ರಿಯೆ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಿಂದ ಸ್ವಲ್ಪಮಟ್ಟಿನ ತ್ಯಾಗ ಅಗತ್ಯವಾಗಿದೆ. ಇದು ಆಗುವಂತೆ ಮಾಡುವುದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಕ್ಕೆ ಕರ್ತವ್ಯದ ಮತ್ತು ಹೆಮ್ಮೆಯ ವಿಷಯವಾಗಬೇಕು.